ಲಾಯರು ಕೂಡಲೇ ಕಾರು ಹತ್ತಿ ಹೊರಟುಹೋದರು. ಅವರು ಹೋಗುತ್ತಿದ್ದಂತೆಯೇ ಇತ್ತ ಬ್ರಾಹ್ಮಣರು ಬಂದರು. ಶಾಸ್ತ್ರೋಕ್ತವಾಗಿ ನಡೆಯಬೇಕಾದುದನ್ನೆಲ್ಲಾ ಮುಗಿಸಿದ ಅನಂತರ ಅವರೊಡನೆ ಸ್ಮಶಾನಕ್ಕೆ ಹೋದೆ. ನನ್ನ ಕೈಯಿಂದಲೇ ಚಿತೆಗೆ ಅಗ್ನಿಕೊಡಿಸಿದರು.

ವಿಧಿ ಎಷ್ಟು ವಿಚಿತ್ರವಾದುದು... ನಾನು ಯಾರೋ..! ಅವರು ಯಾರೋ..! ಅಗ್ನಿಕಾರ್ಯ ಮುಗಿದ ಮೇಲೆ ಬ್ರಾಹ್ಮಣರು ಹಣ ಪಡೆದು ಅಲ್ಲಿಂದ ಹೊರಟುಹೋದರು.

ನಾನು ಅವರ ಮನೆಗೆ ಹೋಗಿ ಸ್ನಾನ ಮಾಡಿ ನನ್ನ ಸಾಮಾನು ತೆಗೆದುಕೊಂಡು ದಾರಿಯಲ್ಲಿಯೇ ಒಂದಿಷ್ಟು ಹೊಟ್ಟೆ ತುಂಬಿಸಿಕೊಂಡು ಮನೆಗೆ ಹೋದೆ. ವಕೀಲರು ಬರಲು ಹೇಳಿದ್ದು ನೆನಪಾದರೂ ಇನ್ನ್ಯಾಕೆ ಹೋಗುವುದು? ಎಂದುಕೊಂಡೆ. ಹಿಂದೆಯೇ ನೆನಪಾಯಿತು, ಮನೆಯ ಬೀಗ ನನ್ನ ಬಳಿಯೇ ಉಳಿದಿರುವುದು. ಅದನ್ನು ಕೊಡಲಾದರೂ ವಕೀಲರ ಆಫೀಸಿಗೆ ಹೋಗಲೇಬೇಕಿತ್ತು.

"ಬನ್ನಿ... ಬನ್ನಿ... ನಿಮಗೆ ಎಷ್ಟು ಥ್ಯಾಂಕ್ಸ್ ಹೇಳಿದರೂ ಸಾಲದು. ನಮ್ಮ ಶೇಷು ಪುಣ್ಯ ಮಾಡಿದ್ರು. ಅನಾಥ ಶವವಾಗದೆ ನಿಮ್ಮಂತಹ ಉತ್ತಮರ ಮೂಲಕ ಸದ್ಗತಿ ಕಂಡರು..." ಎಂದರು.

"ಮನೆ ಬೀಗ ತಗೊಳ್ಳಿ..." ಎನ್ನುತ್ತಾ ಅವರ ಮುಂದೆ ಹಿಡಿದೆ.

"ಅದು ಇನ್ನು ಮುಂದೆ ನಿಮ್ಮದೇ..." ಎಂದರು ವಕೀಲರು.

"ಇದು ನನ್ನದು ಹೇಗಾಗುತ್ತೆ..." ಆಶ್ಚರ್ಯದಿಂದ ಕೇಳಿದೆ.

"ಅವರು ತಮ್ಮ ಉಯಿಲಿನಲ್ಲಿ ಹಾಗೇ ಬರೆದಿದ್ದಾರೆ. ಮತ್ತೊಂದು ವಿಷಯ... ನೀವು ನನಗೆ ಅವರ ಫೋನಿನಿಂದ ಕಾಲ್ ಮಾಡಿದಾಗ, ಶೇಷು ಅವರೇ ಮಾಡಿದ್ದಾರೆ ಅಂದುಕೊಂಡು 'ನಿಮಗೊಂದು ಶುಭವಾರ್ತೆ...' ಎಂದಿದ್ದೆ ನಾನು. ಅದೇನು ಅನ್ನುವುದನ್ನು ಹೇಳ್ತೀನಿ ಕೇಳಿ.

ಅವರು ಕೇಸು ಗೆದ್ದಿದ್ದರು. ಅವರ ಪಾರ್ಟನರ್ ವ್ಯಾಪಾರದಲ್ಲಿ ಅವರನ್ನು ಮೋಸಮಾಡಿ, ಅವರ ಪಾಲನ್ನೂ ಕಿತ್ತುಕೊಂಡಿದ್ದ. ಉಟ್ಟಬಟ್ಟೆಯಲ್ಲಿ ಬೀದಿಗೆ ಬಿದ್ದಿದ್ದರು. ಅವರಿಗೆ ಉಳಿದದ್ದು ಅವರಿದ್ದ ಮನೆಯೊಂದೇ. ಅವರ ಒಬ್ಬನೇ ಒಬ್ಬ ಸ್ನೇಹಿತ ಹೈದರಾಬಾದಿನಲ್ಲಿದ್ದ. ಅವನೇ ನನಗೆ ಇವರನ್ನು ಪರಿಚಯ ಮಾಡಿಸಿ ಸಹಾಯಮಾಡುವಂತೆ ಕೋರಿಕೊಂಡಿದ್ದ.

ಶೇಷೂ ಅವರ ಕೇಸು ನಾನು ಟೇಕಾಫ್ ಮಾಡಿದೆ. ಮನುಷ್ಯ ತುಂಬಾ ಕುಗ್ಗಿಹೋಗಿದ್ದರು. ಕೇಸು ಗೆಲ್ಲುವ ಆಸೆಯನ್ನೇ ಬಿಟ್ಟುಬಿಟ್ಟಿದ್ದರು. ನೀವು ಗೆಲ್ತೀರಿ ಅನ್ನೋ ಭರವಸೆ ಅವರಿಗೆ ಕೊಡುತ್ತಲೇ ಇದ್ದೆ. ಆ ಸಮಯದಲ್ಲೇ ವಿಲ್ಲು ಬರೆದಿದ್ದರು. ಅದರ ಒಂದು ಭಾಗವೇ ಅವರ ಅಂತಿಮ ಕರ್ಮ ಮಾಡಿದವರಿಗೆ ಈ ಮನೆ ಸೇರಬೇಕು ಎಂದು ಬರೆದಿದ್ದಾರೆ. ಮತ್ತೊಂದು ವಿಷಯ. ಕೇಸು ಗೆದ್ದು ತಮ್ಮ ಆಸ್ತಿ ತಮಗೆ ಹಿಂದಕ್ಕೆ ದೊರೆತರೆ, ಅದರಲ್ಲಿ ಸ್ವಲ್ಪಭಾಗ ಅನಾಥಾಲಯಕ್ಕೆ, ಸ್ವಲ್ಪಭಾಗ ದೇವಾಲಯಗಳಿಗೆ, ಉಳಿದದ್ದರಲ್ಲಿ...''

